**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.1684/2018**

**CW- 3** **PW:6**

| | |
|---|---|
| ಸಾಕ್ಷಿಯ ಹೆಸರು | ಃ ಹನಮಂತಪ್ಪ ದೊಡ್ಡಮನಿ(ನಿಂಬಲಗುಂದಿ ಊರ ಹೆಸರು) |
| ತಂದೆ /ಗಂಡನ ಹೆಸರು | ಃ ಮಂಗಳಪ್ಪ |
| ವಯಸ್ಸು | ಃ 53 ವರ್ಷ |
| ಉದ್ಯೋಗ | ಃ ಏನೂ ಇಲ್ಲ |
| ವಾಸಸ್ಥಳ | ಃ ಅಮರಗೋಳ, ಹುಬ್ಬಳ್ಳಿ |

ದಿಃ **21.05.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ತೋರಿದ ನಿಪಿ.2 ಕ್ಕೆ ನಾನು ಸಹಿ ಮಾಡಿದ್ದು ಸಹಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಅಮರಗೋಳದಲ್ಲಿ ನಿಪಿ.2 ಕ್ಕೆ ಸಹಿ ಮಾಡಿದ್ದೇನೆ. ರಸ್ತೆಯ ವಿಚಾರವಾಗಿ ಈ ಸಹಿ ಮಾಡಿದ್ದೇನೆ. ನನ್ನ ಜೊತೆ ಆ ದಿವಸ ಹುಡುಗರು ಇದ್ದರು. ನನ್ನ ಸಮಕ್ಷಮ ಏನೂ ವಶಪಡಿಸಿಕೊಂಡಿಲ್ಲ. ನನಗೆ ಏನು ನೆನಪಾಗುತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 07.11.2017 ರಂದು ನನ್ನ ಮತ್ತು ಚಾಸಾಃ 2 ರವರನ್ನು ಅಮರಗೋಳ ಹರಿಜನಕೇರಿಯಲ್ಲಿರುವ ಶ್ರಿ ಮುದಕಪ್ಪ ಮಾದರ ಇವರ ಮನೆಯ ಎದುರುಗಡೆ ಕರೆಸಿದ್ದರು ಎಂದರೆ ಸರಿ. ನನ್ನ ಮತ್ತು ಚಾಸಾಃ 2 ರವರ ಸಮಕ್ಷಮ ಪೊಲಿಸರು ಪಂಚನಾಮೆ ಮಾಡಿದರು ಎಂದರೆ ಸರಿ. ಪಂಚಾನಮೆ ಅಡಿಯಲ್ಲಿ ನನ್ನ ಸಮಕ್ಷಮ 2 ಬಡಿಗೆಗಳನ್ನು ವಶಪಡಿಸಿಕೊಂಡರು ಎಂದರೆ ಸರಿ. ಆ ದಿನ ಬೆಳಿಗ್ಗೆ 8.45 ರಿಂದ 10 ಗಂಟೆಯವರೆಗೆ

ಪಂಚನಾಮೆ ಮಾಡಿದರು ಎಂದರೆ ಸರಿ. ಚಾಸಾಃ 1 ಗಂಗಮ್ಮ ಇವರು ಪೊಲಿಸರಿಗೆ ಘಟನಾ ಸ್ಥಳ ತೊರಿಸಿದರು. ನಿಪಿ. 2 ನ್ನು ಓದಿ ಕೇಳಿ ಸಹಿ ಮಾಡಿದ್ದೇನೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ಮತ್ತು 2 ನ್ನು ಆ ದಿವಸ ಪೊಲಿಸರು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ**

ನಾನು ಪೊಲಿಸರ ಮುಂದೆ ನನ್ನ ಮನೆತನದ ಹೆಸರನ್ನು ನಿಂಬಲಗುಂದಿ ಅಂತಾ ಬರೆಸಿಲ್ಲ. ನಾನು ಹುನಗುಂದ ತಾಲೂಕ ನಿಂಬಲಗುಂದಿ ಗ್ರಾಮದವ ಹುಬ್ಬಳ್ಳಿಯಲ್ಲೆ ಇರುತ್ತೇನೆ. ಪೊಲಿಸರ ಮುಂದೆ ನಾನು ನಿಂಬಲಗುಂದಿಯವ ಅಂತಾ ಹೇಳಿಲ್ಲ. ಪಂಚನಾಮೆ ಸಲುವಾಗಿ ಪೊಲಿಸರು ನನಗೆ ಯಾವದೇ ನೊಟಿಸ ಕೊಟ್ಟಿಲ್ಲ. ಪಂಚನಾಮೆಗೆ ಬನ್ನಿ ಅಂತಾ ಕರೆದಿಲ್ಲ. ನಿಪಿ.2 ಕ್ಕೆ ಸಹಿಯನ್ನು ಎಲ್ಲಿ ಯಾವಾಗ ಮಾಡಿದ್ದೇನೆ ಎನ್ನುವುದು ಗೊತ್ತಿಲ್ಲ ಎಂದರೆ ಸರಿ. ಪೊಲಿಸರು ನಿಪಿ.2 ಕ್ಕೆ ಸಹಿ ಮಾಡಿಸುವುದಕಿಂತ ಮೊದಲು ಓದಿ ಹೇಳಿ ಕೇಳಿ ಸಹಿ ಮಾಡಿಸಿಕೊಂಡಿಲ್ಲ. ನಿಪಿ.2 ರಲ್ಲಿ ಏನು ಬರೆದಿದ್ದಾರೆ ಎನ್ನುವುದು ನನಗೆ ವೈಯುಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಮು ಮಾ 1 ಮತ್ತು 2 ಗಳನ್ನು ಇದೇ ದಿವಸ ಮೊದಲ ಬಾರಿಗೆ ನ್ಯಾಯಾಲಯದ ನೋಡುತ್ತಿದ್ದೇನೆ ಎಂದರೆ ಸರಿ. ದಿಃ 07.11.2017 ರಂದು ಬೆಳಿಗ್ಗೆ 8.45 ರಿಂದ 10 ಗಂಟೆಗೆ ನಾನು ಮುದಕಪ್ಪ ಅವರ ಮನೆಯ ಹತ್ತಿ ರ ಹೋಗಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.